ಇಲ್ಲವೆ ತಮ್ಮ ಕಾರ್ಯಸಾಧನೆಗಾಗಿಯೋ ನ್ಯಾಯಾಲಯಗಳಲ್ಲಿ ಮಕ್ಕಳನ್ನು ದಾಳಗಳಂತೆ ಬಳಸುತ್ತಿದ್ದಾರೆ. ಇದರಲ್ಲಿ ಮಗು ತನ್ನಿಂದ ದೂರವಾಗುವ ಭಯವೂ ಇರಬಹುದು. ಆದರೆ ಅದರಿಂದ ಆ ಎಳೆ ಮಗುವಿನ ಮೇಲಿನ ಪರಿಣಾಮ ಮಾತ್ರ ಆತಂಕಕಾರಿ. ಅಂತಹ ಕುಟುಂಬಗಳಿಂದ ಬರುವ ಮಕ್ಕಳು ಮನೆಯನ್ನು ತೊರೆದು ಹೋಗುವ ಉದಾಹರಣೆಗಳು ಅತ್ಯಂತ ಸಾಮಾನ್ಯ.

ತಂದೆ– ತಾಯಿಗಳು ತಮ್ಮ ಮಕ್ಕಳ ಬಗ್ಗೆ ಕನಸು ಕಾಣುವುದು ಸಹಜವೇ. ತಾನು ಓದದ ವಿದ್ಯೆಗಳನ್ನೆಲ್ಲ ತನ್ನ ಮಗ– ಮಗಳು ಅರಗಿಸಿಕೊಳ್ಳಬೇಕೆಂದು ಬಹುತೇಕ ಹೆತ್ತವರಲ್ಲಿ ಕಾಣಿಸುವ ಒಂದು ಕುದಿ. ಓದಿನಲ್ಲಿ ತಂದೆ ತಾಯಿಯರ ಅಪೇಕ್ಷೆಗಳನ್ನು ಮುಟ್ಟಲು ಅಸಮರ್ಥರಾದ ಮಕ್ಕಳು ಹೆದರಿಕೆಯಿಂದ ಮನೆಯನ್ನೇ ತೊರೆದು ಹೋಗುವ ಘಟನೆಗಳೂ ಹೆಚ್ಚುತ್ತಿವೆ.

ಸಮಸ್ಯೆಗೆ ಪರಿಹಾರ ಆ ಸಮಸ್ಯೆಯಲ್ಲಿಯೇ ಇರುತ್ತದೆ. ಹೊರಗಿನಿಂದ ಪರಿಹಾರಗಳನ್ನು ಕಂಡುಹುಡುಕಲು ಸಾಧ್ಯವಿಲ್ಲ. ಅದರಿಂದ ಪ್ರಯೋಜನವೂ ಆಗುವುದಿಲ್ಲ. ಒಂದು ಕಾಲದಲ್ಲಿ ನಮ್ಮಲ್ಲಿ ಅವಿಭಕ್ತ ಕುಟುಂಬಗಳು ಹೇರಳವಾಗಿದ್ದವು. ಕುಟುಂಬದಲ್ಲಿ ಅಪ್ಪ– ಅಮ್ಮ ಹೊರಗೆ ಹೋದರೂ ಅಜ್ಜ– ಅಜ್ಜಿ ಮುಂತಾಗಿ ಇನ್ಯಾರಾದರೂ ಹಿರಿಯರು ಇದ್ದೇ ಇರುತ್ತಿದ್ದರು. ಮಕ್ಕಳಿಗೆ ಏನಾದರೂ ಮನಕ್ಲೇಷಗಳು ಉಂಟಾದರೆ ಆಗಿನ ಹಿರಿಯರಿಗೆ ಅದನ್ನು ಗಮನಿಸುವಷ್ಟು ವ್ಯವಧಾನ ಇರುತ್ತಿತ್ತು. ಈಗ ಎಲ್ಲರೂ ಟಿವಿಯಲ್ಲೋ ಮೊಬೈಲ್ ಪರದೆಯಲ್ಲೋ ಮುಳಗಿ ಜಗತ್ತನ್ನೇ ಮರೆಯುವ ಕಾಲ. ಮಕ್ಕಳ

ಚಿತ್ರ: ವಿಶ್ವನಾಥ ಸುವರ್ಣ

